O.S.No.:222/2014

D.W.:1

ಈ ದಿನ ದಿಃ03.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಕೆ.ವೈ.ಎಸ್ ರವರಿಂದಃ-</u>**

1. ನಾನು ಬಿ.ಎ ವರೆಗೂ ವ್ಯಾಸಂಗ ಮಾಡಿರುತ್ತೇನೆ. ಪ್ರತಿವಾದಿ ನನಗೆ ತಮ್ಮನಾಗಬೇಕು. ಪ್ರತಿವಾದಿ ವಿದ್ಯಾವಂತರಲ್ಲ ಎಂದರೆ ಸರಿ. ಈ ದಾವೆಯಲ್ಲಿ ನಾನು ಪ್ರತಿವಾದಿ ಅಲ್ಲ ಎಂದರೆ ಸರಿ. ಪ್ರತಿವಾದಿ ಆರೋಗ್ಯವಾಗಿದ್ದಾರೆ ಎಂದರೆ ಸಾಕ್ಷಿಯು ಅವರಿಗೆ ಕಿವಿ ಕೇಳಿಸುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ಈ ಪ್ರಕರಣದಲ್ಲಿ ಬಂದು ಸಾಕ್ಷಿ ನುಡಿದರೆ ಸತ್ಯಾಂಶ ಹೊರಗೆ ಬರುತ್ತದೆ ಎಂಬ ಕಾರಣಕ್ಕೆ ಪ್ರತಿವಾದಿ ಆರೋಗ್ಯವಾಗಿದ್ದರೂ ಆತನಿಗೆ ಸರಿಯಾಗಿ ಕಿವಿ ಕೇಳಿಸುತ್ತಿದ್ದರು ಆತನಿಂದ ಸುಳ್ಳು ಅಧಿಕಾರ ಪತ್ರವನ್ನು ಪಡೆದುಕೊಂಡು ಸುಳ್ಳು ಸಾಕ್ಷ್ಯ ನುಡಿಯಲು ನಾನು ಬಂದಿರುತ್ತೇನೆ ಎಂದರೆ ಸರಿಯಲ್ಲ.

2. ವಾದಿ ಮತ್ತು ನಾವು ರಕ್ತಸಂಬಂಧಿಕರು ಅಲ್ಲ ಎಂದರೆ ಸರಿ. ನಾವು ಹಾಗೂ ವಾದಿಗಳು ದಾಯಾದಿಗಳು ಅಲ್ಲ ಎಂದರೆ ಸರಿ. ನಿಡಿ-2ರ ಪ್ರಕಾರ ಸರ್ವೆ ನಂ.72/3ರ ದಾಖಲೆಯು ಕಾಡ ಎನ್ನುವವರ ಹೆಸರಿಗೆ ಬರುತ್ತಿದೆ. ಸದರಿ ಕಾಡ ಎನ್ನುವವರು ವಾದಿಯ ಗಂಡನ ತಂದೆ ಎಂದರೆ ಸರಿ. ನಿಡಿ-2ರ ಪ್ರಕಾರ ಸರ್ವೆ ನಂ.72/2ರ ಜಮೀನು ಕಾಡ ಬಿನ್ ಕುನ್ನ ಎನ್ನುವವರ ಹೆಸರಿಗೆ ನಮೂದು ಇದೆ ಎಂದರೆ ಸಾಕ್ಷಿಯು ದಾಖಲೆಯನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ನಿಡಿ-

2 ರಿಂದ ನಿಡಿ-8 ರ ಪ್ರಕಾರ ಸರ್ವೆ ನಂ.72/3ರ ಜಮೀನು ಕಾಡ ಬಿನ್ ವೀರಭದ್ರ ಎನ್ನುವವರ ಹೆಸರಿಗೆ ನಮೂದು ಇದೆ ಎಂದರೆ ಸರಿ. ನಿಡಿ-9 ಮತ್ತು ನಿಡಿ-10ರ ಪ್ರಕಾರ ಸರ್ವೆ ನಂ.72/3ರ ಜಮೀನು ವಾದಿಯ ಹೆಸರಿಗೆ ಬರುತ್ತಿದೆ ಎಂದರೆ ಸರಿ. ನಿಡಿ-9 ಮತ್ತು ನಿಡಿ-10ರ ಪಹಣಿ ಪತ್ರಿಕೆಗಳ ಅನುಭವದ ಕಾಲಂಗಳಲ್ಲಿ ವಾದಿಯ ಹೆಸರು ಬರುತ್ತಿದೆ ಎಂದರೆ ಸಾಕ್ಷಿಯು ದಾಖಲೆಗಳಲ್ಲಿ ಇದೆ ಆದರೆ ಅವರು ಸ್ವಾಧೀನದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ವಾದಿ ದಾವಾಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದು ತೋರಿಸಲು ನೀವು ಯಾವುದಾದರೂ ದಾಖಲೆಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಕ್ರಯಪತ್ರಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಾವು ದಾವಾಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿದ್ದೇವೆ ಎಂದು ತೋರಿಸಲು ಕಂದಾಯದ ರಶೀದಿಗಳನ್ನು ಹಾಜರುಪಡಿಸಿದ್ದೇವೆ. ಈ ರೀತಿ ಎಷ್ಟು ವರ್ಷಗಳ ಕಂದಾಯದ ರಶೀದಿಗಳನ್ನು ನೀವು ಹಾಜರುಪಡಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು 2024ರ ವರೆಗಿನ ಕಂದಾಯ ರಶೀದಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

3. ನಿಡಿ-11ನ್ನು ಈ ದಾವೆಯ ಉದ್ದೇಶಕೋಸ್ಕರವೇ ಪಾವತಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-11ಕ್ಕೆ ತಹಶೀಲ್ದಾರ್ ರವರ ಸಹಿ ಇಲ್ಲ ಎಂದರೆ ಸಾಕ್ಷಿಯು ಕಂದಾಯ ಇಲಾಖೆಯವರ ಸಹಿ ಇದೆ ಎಂದು ನುಡಿಯುತ್ತಾರೆ. ನಿಡಿ-

O.S.No.:222/2014
D.W.:1

13ನ್ನು ಯಾರು ಯಾರಿಗೆ ಬರೆದುಕೊಟ್ಟಿರುತ್ತಾರೆ ಎಂದು ನಿಮಗೆ ಹೇಳಲು ಬರುತ್ತದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು 1960ನೇ ಇಸವಿಯಲ್ಲಿ ಮಾರೇಗೌಡ ಬಿನ್ ಕರಿಕುನ್ನನ ವೀರಭದ್ರೇಗೌಡ ಮತ್ತು ವಾದಿಯ ಗಂಡನಾದ ವೀರಭದ್ರೇಗೌಡ ರವರು ಚೂಡಲಿಂಗೇಗೌಡ ಉಃ ಶಿವಣ್ಣ ಎನ್ನುವವರಿಗೆ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-13ರಂತೆ ಆಗಿರುವ ಕ್ರಯಪತ್ರವು ಸರ್ವೆ ನಂ.72/2ಕ್ಕೆ ಸಂಬಂಧಿಸಿದ್ದು, ಆ ಜಮೀನು ಕಾಡ ಬಿನ್ ಕುನ್ನ ರವರಿಗೆ ಸೇರಿದ ಜಮೀನು ಎಂದರೆ ಸರಿಯಲ್ಲ. ಸರ್ವೆ ನಂ.72/3ರ ಜಮೀನು ಕಾಡ ಬಿನ್ ವೀರಭದ್ರ ಎನ್ನುವವರಿಗೆ ಸಂಬಂಧಿಸಿದ್ದು ಹಾಗಾಗಿ ಅವರುಗಳು 1960ರಲ್ಲಿ ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಕ್ರಯಪತ್ರವನ್ನು ಚೂಡಲಿಂಗೇಗೌಡ ರವರಿಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಆಲಿಸಿ ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**

O.S.No.:222/2014
D.W.:1